# ಹೂವು ಚೆಲುವೆಲ್ಲ ತಂದೆಂದಿತು

ಮೊದಲು ಮಂಟಪಕ್ಕೆ ಹಾಗೂ ಆರತಕ್ಷತೆಗೆ ಹೂವಿನ ಅಲಂಕಾರ ಮಾಡಿಸುವುದರಲ್ಲಿ ಕಲೆಗಾರಿಕೆ ತೋರಿಸುವುದು ಹೆಮ್ಮೆಯ ಸಂಗತಿಯಾಗಿತ್ತು. ಈಗ ಇದು ವಿಸ್ತರಣೆಗೊಂಡಿದೆ. ಬೆಂಗಳೂರು, ಮಂಗಳೂರು, ಉಡುಪಿಯಂತಹ ನಗರಗಳಲ್ಲೂ ಮಂಟಪಕ್ಕೆ ಅಲಂಕಾರ ಮಾಡುವುದಕ್ಕಷ್ಟೇ ಅಂತಹ ಸೇವೆ ಒದಗಿಸುವ ಕಂಪನಿಗಳು ಸೀಮಿತವಾಗಿಲ್ಲ. ಹಳದಿ, ಮೆಹೆಂದಿ, ಕಾಕ್ಟೇಲ್ ಪಾರ್ಟಿ, ರಿಂಗ್ ಸೆರೆಮನಿ (ಉಂಗುರ ತೊಡಿಸುವ ಶಾಸ್ತ್ರ) ಹೀಗೆ ಮದುವೆಗೆ ಮೊದಲು ಕಂತು ಕಂತಿನಲ್ಲಿ ಹಲವು ಸಮಾರಂಭಗಳನ್ನು ನಡೆಸುವುದು ಅನೇಕರಿಗೆ ಪ್ರತಿಷ್ಠೆಯ ವಿಷಯವಾಗಿದೆ.

‘ಪ್ರೇಮಕಥೆಗಳಿಗೆ ನಾವು ಚೆಂದದ ವಿನ್ಯಾಸ ತೊಡಿಸುತ್ತೇವೆ. ಸಮಾರಂಭ ಯಾವುದೇ ಆಗಿರಲಿ, ಹೂವಿನ ಅಲಂಕಾರದ ಮೆರುಗು ತುಂಬುವುದು ನಮ್ಮ ಜಾಯಮಾನ. ಬಣ್ಣಗಳು, ಪರಿಮಳದ ಹದವರಿತ ಮಿಶ್ರಣದಿಂದ ಸಮಾರಂಭಕ್ಕೆ ಮುದದ ಅನುಭವ ದಕ್ಕಿಸಿಕೊಡುತ್ತೇವೆ. ಇದಕ್ಕಾಗಿ ನಮ್ಮ ಪರಿಣತರ ತಂಡವೇ ಟೊಂಕಕಟ್ಟಿ ನಿಂತಿದೆ’ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ ‘ಕಲಾಂಜನಿ’ ಎಂಬ ಹೂವಿನ ಅಲಂಕಾರ ಮಾಡುವ ಕಂಪನಿಯ ಸಿಇಒ ಕಿರಣ್. ಕನ್ನಡ ಚಲನಚಿತ್ರ ನಿರ್ದೇಶಕ ತರುಣ್ ಸುಧೀರ್ ಹಾಗೂ ನಟಿ ಸೋನಲ್ ಮೊಂತೆರೊ ಮದುವೆಗೆ ಹೂಗಳ ವಿನ್ಯಾಸ ಮಾಡಿದ್ದು ಇದೇ ‘ಕಲಾಂಜನಿ’ ಕಂಪನಿ.



ಲತಾ ಇವೆಂಟ್ಸ್, ಸೌಂದರ್ಯ ಇವೆಂಟ್ಸ್, ವಿಶ್ ಕೋ, ವಂಡರ್ ಇವೆಂಟ್ಸ್, ಈಶಾನ್ವಿ ಕ್ರಿಯೇಷನ್ಸ್, ಸ್ಟಾರ್ಸ್ ವೆಡಿಂಗ್ಸ್ ಹೀಗೆ ಹಲವು ಸಂಸ್ಥೆಗಳು ಮದುವೆ ಸಮಾರಂಭಕ್ಕೆ ಹೂವಿನ ಅಲಂಕಾರದ ಸೇವೆಯನ್ನು ಕಲ್ಪಿಸುತ್ತವೆ. ಬಹುತೇಕ ಕಂಪನಿಗಳು ಅಲಂಕಾರಕ್ಕೆ ಕನಿಷ್ಠ 75 ಸಾವಿರ ಶುಲ್ಕ ಪಡೆಯುತ್ತವೆ. ಅಗತ್ಯಕ್ಕೆ ತಕ್ಕಷ್ಟು ಇದು ಲಕ್ಷಗಟ್ಟಲೆ ರೂಪಾಯಿವರೆಗೆ ವಿಸ್ತರಿಸುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಕಲ್ಯಾಣ ಮಂಟಪದ ಬಾಡಿಗೆಗಿಂತ ಹೂವಿನ ಅಲಂಕಾರಕ್ಕೇ ಹೆಚ್ಚು ವಿನಿಯೋಗಿಸುವವರೂ ಇದ್ದಾರೆ.



ವಿವಾಹ ಸಂಭ್ರಮದಲ್ಲಿ ತೆಲುಗಿನ ನಟ ವಿಜಯ್ ದೇವರಕೊಂಡ ಮತ್ತು ನಟಿ ರಶ್ಮಿಕಾ ಮಂದಣ್ಣ



ನಡೆಯಬೇಕು ಎನ್ನುವುದನ್ನು ವ್ಯವಸ್ಥಿತವಾಗಿ ಯೋಜಿಸುತ್ತಾರೆ.

- ‘ವೆಡಿಂಗ್ ಪ್ಲ್ಯಾನರ್’ಗಳನ್ನು ನಿಯೋಜಿಸಿಕೊಳ್ಳುವವರ ಸಂಖ್ಯೆ ಶೇ 16.7ರಷ್ಟು ಇದ್ದು, ಏರಿಕೆಯಾಗುತ್ತಿದೆ. 2023–24ರಲ್ಲಿ ಈ ಸಂಖ್ಯೆ ಶೇ. 15 ಇತ್ತು.
- ‘ಡೆಸ್ಟಿನೇಷನ್ ವೆಡಿಂಗ್’ ಹೆಚ್ಚು ಜನಪ್ರಿಯವಾಗುತ್ತಿರುವುದೇ ವ್ಯವಸ್ಥಾಪಕರನ್ನು ನೇಮಿಸಿಕೊಳ್ಳುವ ಪರಿಪಾಟ ಹೆಚ್ಚಾಗಲು ಕಾರಣ. ಒಟ್ಟಾರೆ ಅದ್ದೂರಿ ವಿವಾಹಗಳ ಪೈಕಿ ಶೇ 60ರಷ್ಟು ‘ಡೆಸ್ಟಿನೇಷನ್ ವೆಡಿಂಗ್’ ಆಗಿರುತ್ತವೆ. ದೊಡ್ಡ ಮೊತ್ತ ಖರ್ಚು ಮಾಡುವ ಒಟ್ಟಾರೆ ಮದುವೆಗಳ ಪೈಕಿ ಕಾಲುಭಾಗದಷ್ಟು ‘ಡೆಸ್ಟಿನೇಷನ್ ವೆಡಿಂಗ್’ ಆಗಿರುತ್ತವೆ.
- ಅದ್ದೂರಿ ಮದುವೆ ಮಾಡುವವರಲ್ಲಿ ಪ್ರಯೋಗಾಲಯದಲ್ಲಿ ಸಿದ್ಧಪಡಿಸುವ ವಜ್ರ ಬಳಸಿ ಒಡವೆಗಳನ್ನು ಮಾಡಿಸಿಕೊಳ್ಳುವವರ ಸಂಖ್ಯೆ ಶೇ. 45.5ರಷ್ಟಿದೆ.
- ಅನ್ನದಾನ ಮಾಡುವುದು, ಪ್ಲಾಸ್ಟಿಕ್ ಮುಕ್ತವಾಗಿ ಮದುವೆ ಆಚರಿಸಿಕೊಳ್ಳುವುದು ಶೇ 52ರಷ್ಟು ಜೋಡಿಗಳ ನಿರ್ಧಾರ.

‘ವೆಡ್‌ಮಿಗುಡ್’ ಕಂಪನಿಯ ಸಹ ಸ್ಥಾಪಕಿ ಮೆಹೆಕ್ ಸಾಗರ್ ಶಹಾನಿ ಅವರು ಈ ರೀತಿಯ ಸಮೀಕ್ಷೆ ನಡೆಸಿದ್ದರಿಂದ ತಮ್ಮ ಸೇವಾ ವ್ಯವಸ್ಥೆಯನ್ನು ತಾವು ಸುಧಾರಿಸಿಕೊಳ್ಳಲೂ ಸಾಧ್ಯವಾಯಿತು ಎಂದು ಹೇಳಿಕೊಂಡಿದ್ದಾರೆ.

## ಭಿನ್ನ ಕಥೆಗಳು

‘ಹಮ್‌ಆಪ್ಕೆ ಹೈ ಕೌನ್’ ಹಿಂದಿ ಸಿನಿಮಾ ನೆನಪಿರಬೇಕಲ್ಲವೇ? 1994ರಲ್ಲಿ ತೆರೆಕಂಡಿದ್ದ ಈ ಸಿನಿಮಾವನ್ನು ಸೂರಜ್ ಬರ್ಜಾತ್ಯಾ ನಿರ್ದೇಶಿಸಿದ್ದರು. ಆ ಕಾಲದಲ್ಲಿ ₹4.5 ಕೋಟಿಯಲ್ಲಿ ತಯಾರಾಗಿದ್ದ ಈ ಸಿನಿಮಾ ದುಪ್ಪಟ್ಟು ಹಣವನ್ನು ಮಾಡಿತ್ತು. ಇಡೀ ಸಿನಿಮಾದ ಕಥಾವಸ್ತು ಮದುವೆಯ ಬಂದ ಕುರಿತದ್ದು. ಅದರಲ್ಲಿ ವಿವಾಹದ ಆಚರಣೆಗಳ ಅಧ್ಯಾಯಗಳೇ ಹೆಚ್ಚಾಗಿದ್ದವು. ಅದ್ದೂರಿ ಮದುವೆಯೊಂದನ್ನು ನೋಡುತ್ತಾ ಸುಖಾನಂದ ಪಟ್ಟ ಪ್ರೇಕ್ಷಕರಿಗೆ ಮೂರೂವರೆ ತಾಸು ಅವಧಿಯ ಚಿತ್ರವು ಬೋರ್ ಹೊಡೆಸಿರಲಿಲ್ಲ. ಸಲ್ಮಾನ್‌ಖಾನ್, ಮಾಧುರಿ ದೀಕ್ಷಿತ್ ಆಗ ತೊಟ್ಟಿದ್ದ ಉಡುಗೆಗಳು